CW :6
PW :5

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.1188/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಸೈಯದ್ ಮೊಹಮ್ಮದ್ ಹಸನ್ |
| ತಂದೆಯ ಹೆಸರು | : | ಮೊಹಮ್ಮದ್ |
| ಪ್ರಾಯ | : | 63 |
| ಉದ್ಯೋಗ | : | ಟೇಲರಿಂಗ್ |
| ವಾಸಸ್ಥಳ | : | ಬೆಳ್ತಂಗಡಿ |
| ದಿನಾಂಕಃ 06.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನಗೆ ಚಾಸಾ7 ಗೊತ್ತಿಲ್ಲ. ಪೋಲೀಸರು ನನ್ನ ಬಳಿ ಯಾವುದೇ ವಾಹನದ ಬಗ್ಗೆ ವಿಚಾರಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಯನ್ನು ತೋರಿಸಿ, ಅದರಲ್ಲಿರುವ ಸಹಿಯ ಬಗ್ಗೆ ಕೇಳಿರುವುದಿಲ್ಲ. ಚಾಸಾ7 ರವರಿಗೆ ನಾನು ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ದಾಖಲಾತಿಯಲ್ಲಿ ಸಹಿಯನ್ನು ಕೊಟ್ಟಿರುವುದಿಲ್ಲ ಮತ್ತು ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿ ನನಗೆ ಗೊತ್ತಿಲ್ಲ.
(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು**)

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕಃ 25.05.2017 ರಂದು ಪುತ್ತೂರು ನಗರ ಪೋಲೀಸ್ ಠಾಣೆಯ ಪೋಲೀಸರು ನನ್ನನ್ನು ಠಾಣೆಗೆ ಕರೆದು ನನ್ನ ಹೆಸರಿನಲ್ಲಿ ಪುತ್ತೂರು ಸಾರಿಗೆ ಕಚೇರಿಯಲ್ಲಿ KA50N9164 ನೊಂದಣಿಯಾದ ಮಹೀಂದ್ರಾ ಬೋಲೆರೋ ವಾಹನದ ಬಗ್ಗೆ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ ನಾನು

CW :6
PW :5

ಪೋಲೀಸರಲ್ಲಿ ನನ್ನಲ್ಲಿ ಯಾವುದೇ ವಾಹನ ಇರುವುದಿಲ್ಲ ಎಂದು ತಿಳಿಸಿದ್ದು, ಪೋಲೀಸರು ದಿಃ15.03.2014 ರಂದು KA50N9164 ರ ವಾಹನದ ಪ್ರಪ್ರತ್ರ 29 ಮತ್ತು 30 ರ ನಕಲು ಪ್ರತಿಯನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಪ್ರತ್ರದಲ್ಲಿ ಸುರೇಶ್ ಕುಮಾರ್ ರವರ ಹೆಸರಿನಲ್ಲಿದ್ದ ವಾಹನವನ್ನು ನನ್ನ ಹೆಸರಿಗೆ ವರ್ಗಾಯಿಸುವ ಸಂಬಂಧ ವಿವರ ನಮೂದಿಸಿದ್ದು,2 ಪ್ರಪ್ರತ್ರಗಳ ಹಿಂಬದಿಯಲ್ಲಿ ನನ್ನ ನಕಲಿ ಸಹಿ ಮಾಡಿರುವುದು ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ಸಹಿಗಳು ಕಾಣುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರದ ಪ್ರಕಾರ ದಿಃ23.02.2014 ರಂದು KA50N9164 ನೇ ಮಹೀಂಧ್ರಾ ವಾಹನವು ನನ್ನ ಹೆಸರಿಗೆ ಮಾಲಿಕತ್ವ ವರ್ಗಾಯಿಸಿಕೊಂಡ ವಿಚಾರ ಆಗ ನನಗೆ ಖಚಿತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಖರೀದಿಸಿರುವುದಿಲ್ಲ ಹಾಗೂ ಯಾವುದೇ ವಾಹನವನ್ನು ಬೇರೆ ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 2014 ರಲ್ಲಿ ತಾನು ಖರೀದಿಸಿದ ವಾಹನವನ್ನು ತಮ್ಮ ಹೆಸರಿಗೆ ಮಾಡಲು ಬೆಳ್ತಂಗಡಿ ತಾಲೂಕಿಗೆ ಒಳಪಟ್ಟ ದಾಖಲೆ ಬೇಕೆಂದು ಆತನ ಸ್ನೇಹಿತನಾದ ಆರೋಪಿ ತಿಳಿಸಿರುವುದಾಗಿ ನನ್ನಲ್ಲಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ತನ್ನ ಹೆಸರಿಗೆ ಖರೀದಿಸಲು ತನ್ನಲ್ಲಿ ಯಾವುದೇ ದಾಖಲಾತಿಗಳು ಇಲ್ಲ, ಆ ಕಾರಣವಾಗಿ ನನ್ನ ಗುರುತಿನ ಚೀಟಿಯ ನಕಲು ಪ್ರತಿಯನ್ನು ನೀಡಬೇಕೆಂದು ವಿನಂತಿಸಿದಂತೆ ನಾನು ನನ್ನ ಚುನಾವಣಾ ಗುರುತಿನ ಚೀಟಿಯ ಪ್ರತಿಯನ್ನು ಆತನಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗುರುತಿನ ಚೀಟಿಯ ಆಧಾರದ ಮೇಲೆ ಸದರಿ ವಾಹನವನ್ನು ನನ್ನ ಹೆಸರಿಗೆ ನೊಂದಣಿ ಮಾಡಿದ ಬಗ್ಗೆ ಕಂಡುಬಂದಿರುತ್ತದೆ ಎಂದು ತನಿಖಾಧಿಕಾರಿಯವರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸದರಿ ವಾಹನದ ನಕಲಿ ದಾಖಲೆ ಸೃಷ್ಟಿಸಿ ಪ್ರಥಮವಾಗಿ ಸುರೇಶ್ ಕುಮಾರ್ ಎಂಬ ಬೇನಾಮಿ ಹೆಸರಿನಲ್ಲಿ ಪುತ್ತೂರು RTO ದಲ್ಲಿ ನೊಂದಣಿ ಮಾಡಿಸಿ ಆ ಬಳಿಕ ಸದರಿ ವಾಹನಕ್ಕೆ ಪೈನಾನ್ಸ ನಿಂದ ಸಾಲ ಪಡೆದು ವಂಚಿಸಲು ನನ್ನ ವಾಸ್ತವ್ಯದ ದಾಖಲೆಗಳನ್ನು ಬಳಸಿ ನನ್ನ ನಕಲಿ ಸಹಿ ಮಾಡಿ ವಾಹನವನ್ನು ನನ್ನ ಹೆಸರಿಗೆ ನೊಂದಾಯಿಸಿ ಉಪಯೋಗಿಸುತ್ತಿದ್ದ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರು ನನ್ನಿಂದ 6 ಪುಟಗಳಲ್ಲಿ ನನ್ನ ಹೋಲಿಕೆಯ ಕೈಬರಹದ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಪಿ-27** ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು ಆರೋಪಿಗಳ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲ**

CW :6
PW :5

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು